

## ಬೀಚಿ ಉವಾಚ

★ ನಗೆ ಎನ್ನುವುದು ಒಬ್ಬನೇ ಅನುಭವಿಸುವ ವಸ್ತುವಲ್ಲ. ಅದು ಪಾಂಡವರಿಗೆ ಸೇರಿದ ದ್ರೌಪದಿಯಂತೆ!

★ ಯಾರೂ ಇಲ್ಲದಿದ್ದರೆ ಅಕ್ಕನ ಗಂಡನೇ ಗತಿ. ಗಂಡನನ್ನು ಬಿಟ್ಟವಳಿಗೆ ಮಕ್ಕಳೇ ಗತಿ. ಪರಪುರುಷ ನಿಲ್ಲದಾಗ ಕೈಹಿಡಿದ ಪತಿಯೇ ಗತಿ. ಒಲುಮೆಗೆ ಅಭಾವವಾದಾಗ ಜುಲುಮೆಯೇ ಗತಿ.

★ ಸೊಸೆ ಕಾಲು ಚಾಚಿ ಕುಳಿತರೆ ಅತ್ತೆ ಕಣ್ಣು ಬಿಡುತ್ತಾಳೆ. ಮಗಳ ಹಾದರಕ್ಕೆ ಮಾತ್ರ ಕಣ್ಣು ಮುಚ್ಚಿಕೊಳ್ಳುತ್ತಾಳೆ!

★ ಪ್ರತಿಯೊಬ್ಬನಿಗೂ ಇನ್ನೊಬ್ಬನೇ ಚೆಂದ, ಅವನ ಹೆಂಡತಿಯಂತೂ ಇನ್ನೂ ಚೆಂದ.

★ ನನಗಿರುವುದು ಒಂದೇ ನಾಲಿಗೆ. ನಾನದನ್ನು ನೀರಿಗೂ ಬಳಸುತ್ತೇನೆ, ಬೀರಿಗೂ ಬಳಸುತ್ತೇನೆ!

★ ಮುತ್ತಿನ ನತ್ತು ಹೋಯಿತು. ಮೂಗಿನ ತೂತು ಮಾತ್ರ ಉಳಿಯಿತು.

★ ರಸಿಕ ಜನರ ಸಹವಾಸ ಬೇಕು ಅಂದರೆ ನರಕಕ್ಕೆ ಹೋಗಬೇಕು. ಒಳ್ಳೇ ಹವೆ ಬೇಕು ಅಂದರೆ ಸ್ವರ್ಗ ಸಾಕು.

★ ಜ್ಯೋತಿಷ್ಯ ಎಂಬುದು ಒಂದು ಸ್ಮಾಲ್ ಸ್ಕೇಲ್ ಇಂಡಸ್ಟ್ರಿ. ಅದಕ್ಕೆ ಬೇಕಾದುದು ಎರಡೇ ವಸ್ತುಗಳು: ಒಂದು– ಹಳೆಯ ಪಂಚಾಂಗ, ಎರಡು– ಹೆಚ್ಚು ಮಾತು.

★ ಡಾಕ್ಟರ್‌ನ ಪ್ರಯತ್ನ ಎಲ್ಲಿಯವರೆಗೂ...? ಜೀವಂತ ಇರುವವರು ಸಾಯುವವರೆಗೂ!

★ ಬಯಸಿದುದನ್ನು ಬರೆಯುವುದರಿಂದ ತೃಪ್ತಿ ಸಿಗುತ್ತದೆ ಎಂಬುದು ಮೂರ್ಖನು ಹೇಳುವ ಮಾತು. ಕುಡಿದಂತೆಲ್ಲಾ ದಾಹವು ಹೆಚ್ಚಾಗುತ್ತಲ್ಲ ಇದಕ್ಕೇನೆನ್ನುತ್ತೀರಿ?

★ ನಿಜವಾಗಿಯೂ ನವೆಯಾಗುವುದು ತಲೆಯ ಒಳಗೆ. ಆದರೆ ನಾವು ಕೆರೆಯುವುದು ತಲೆಯ ಹೊರಗೆ. ಅದಕ್ಕೇ ಒಳಗಿನದು ಹೊರಗೆ ಬರದೆ, ತಲೆ ಕೆರೆದಾಗ ಉಗುರಲ್ಲಿ ಮಣ್ಣು ಬರುತ್ತದೆ.

★ ನಿದ್ರೆ ಏಡಿಯ ಜಾತಿ. ಏಕೆಂದರೆ ಬರುತ್ತಿರುವಾಗ ಹೋಗುತ್ತಿರುವಂತೆ ಕಾಣುತ್ತದೆ.

★ ಪತಿವ್ರತೆ ಎಂದರೆ ಯಾರು? ಪತಿಯೇ ಇಲ್ಲದ ಎಳೆಯ ವಯಸ್ಸಿನ ಹುಡುಗಿ.

★ ಸೌಂದರ್ಯ ಎಂದರೆ ಮದುವೆ ಆದ ಮೂರು ತಿಂಗಳು ಮಾತ್ರ ಹೆಂಡತಿಯ ಮುಖದಲ್ಲಿದ್ದು, ನಂತರ ಬೇರೆ ಎಲ್ಲ ಹೆಂಡತಿಯರ ಮುಖಕ್ಕೆ ಟ್ರಾನ್ಸ್‌ಫರ್ ಆಗುವ ಟ್ರಾನ್ಸ್‌ಫರ್ ಸೀನರಿ. ಈ ಟ್ರಾನ್ಸ್‌ಫರ್ ಸೀನರಿಗೆ ಸೌಂದರ್ಯ ಎಂದು ಹೆಸರು.

★ ಚುನಾವಣೆ ಎಂಬುದು ಮಾರೆಮ್ಮನ ಜಾತ್ರೆ. ಅಲ್ಲಿ ಆಹುತಿಯಾಗುವುದು ಪ್ರಜಾಪ್ರಭುತ್ವದ ತಲೆ.

★ ಚುನಾವಣೆಯಲ್ಲಿ ಗೆದ್ದ ಕತ್ತೆಯೇ ಸರ್ವರಿಗೂ ಕಾಮಧೇನು.

★ ಹಣದ ಚೀಲ ಮಾತನಾಡುತ್ತಿರುವಾಗ ಸತ್ಯ ಮೂಲೆಯಲ್ಲಿ ಸತ್ತಂತೆ ಬಿದ್ದಿರುತ್ತದೆ.

★ ಶ್ರೀಮಂತಿಕೆ ತರುವ ರೋಗಗಳಲ್ಲಿ ಜಾಣಕಿವುಡು ಬಹಳ ದೊಡ್ಡ ರೋಗ.

★ ಕಾನ್ವೆಂಟ್‌ಗೆ ಮೈಗಿಂತಲೂ ಪೋಷಾಕೆ ಮುಖ್ಯ.

★ ಮೈ ಸೊಟ್ಟಗಿದ್ದರೆ ನಡೆಯುತ್ತದೆ. ಇಸ್ತ್ರಿ ಮಾಡಿದ ಯೂನಿಫಾರಂ ಸೊಟ್ಟಗಿರಬಾರದು.

★ಬಡವಾ ಬಲ್ಲಿದನಾಗನೇ... ಚುನಾವಣೆ ಬರಲ್.

★ಚಿಂತೆಯಿಂದ ಬಿಳಿ ಕೂದಲು ಬರುತ್ತದೆ. ಬಿಳಿ ಕೂದಲು ಬಂತಲ್ಲ ಎಂಬ ಚಿಂತೆ ಶುರುವಾಗುತ್ತದೆ.

## ರಾಶಿ ಜೋಕು



ನೀನೂ ಬದುಕಬೇಕು

ಅ: ಮರಿ ಹುಷಾರು ತಪ್ಪಿದರೆ, ನೀನು ಡಾಕ್ಟರ್ ಹತ್ರ ತೋರಿಸ್ಕೋಬೇಕು.

ಕು: ಆಯ್ತು ಬಾಸ್.

ಅ: ಅಷ್ಟೇ ಅಲ್ಲ, ಕೇಳಿಲ್ಲಿ... ಅವರು ನಿನಗೆ ಔಷಧಿ ಚೀಟಿ ಬರೆದುಕೊಡ್ತಾರೆ. ಅದನ್ನು ತಗೊಂಡು ಡಾಕ್ಟ್ರ ಫೀಸ್ ಕೊಟ್ಟು ಬರಬೇಕು. ಯಾಕ್ ಗೊತ್ತಾ? ಡಾಕ್ಟ್ರು ಬದುಕಬೇಕು.

ಕು: ಆಯ್ತು ಬಾಸ್.

ಅ: ಚೀಟಿ ತಗೊಂಡು ನೇರ ಔಷಧಿ ಅಂಗಡಿಗೆ ಹೋಗಿ ಮಾತ್ರೆ ತಗೋಬೇಕು. ಯಾಕ್ ಗೊತ್ತಾ... ಔಷಧಿ ಅಂಗಡಿಯವರೂ ಬದುಕಬೇಕು.

ಕು: ಆಯ್ತು ಬಾಸ್.

ಅ: ಇನ್ನೂ ಇದೆ. ಕೇಳೋ ಇಲ್ಲಿ ಮಂಕೆ... ಔಷಧಿ ತಂದು ಅದನ್ನ ಮೋರಿಗೆ ಚೆಲ್ಲಬೇಕು.

ಕು: ಯಾಕೆ ಬಾಸ್?

ಅ: ನೀನೂ ಬದುಕಬೇಕು.

## ಕೈಲಾಸಂ ಚಟಾಕಿ

ಒಮ್ಮೆ ಕೈಲಾಸಂ ಅವರು ಸ್ನೇಹಿತನೊಂದಿಗೆ ಮೈಸೂರು ಮಹಾರಾಜರ ಮೆರವಣಿಗೆ ನೋಡುತ್ತ ನಿಂತಿದ್ದರು. ಕೈಲಾಸಂ ತನ್ನ ಸ್ನೇಹಿತನಿಗೆ ಹೇಳಿದರು: ಕೆಳಗಿರುವುದು ಆನೆ, ಮೇಲೆ ಕುಳಿತಿರುವವರು ರಾಜರು.

ಸ್ನೇಹಿತ: ಗೊತ್ತು. ಅಷ್ಟೂ ತಿಳಿಯಲ್ವೆ?

ಕೈಲಾಸಂ: ತಿರುವು ಮುರುವು ತಿಳ್ಕೊಂಬಿಟ್ಟೀಯಾ ಅಂತ ಹೇಳಿದೆ.

